'ಚಹ ತಗೋತೀಯಾ?'

'ಚಹ ಬೇಡ... ಆದರೆ ನೀನು ಬಿಡುವಾಗಿದ್ದೀಯಾ?'

ನಾನು ಕೈಗಡಿಯಾರ ನೋಡುತ್ತೇನೆ. ಬಸ್ ಹೊರಡುವ ಸಮಯವಾಗಿದೆ. ಆದರೆ ಸ್ವಾತಿಗೆ ಬಿಟ್ಟು ಹೋಗುವಂತಿಲ್ಲ.

'ಹೌದೌದು... ನಾನು ಏಳುಗಂಟೆಯ ಬಸ್ಸಿಗೆ ಹೋಗ್ತೀನಿ.'

ಸ್ವಾತಿಯೊಂದಿಗೆ ನಾನು ಪೇಟೆಗೆ ಬರುತ್ತೇನೆ. ನಾವು ದಾರಿಯಲ್ಲಿರುವ ಒಂದು ಹೋಟೆಲಿಗೆ ಹೋಗುತ್ತೇವೆ.

'ನಿನ್ನ ತಾಯಿ ಹೇಗಿದ್ದಾರೆ?' ಏನಾದರೂ ಕೇಳಬೇಕೆಂದು ಪ್ರಶ್ನೆ ಕೇಳುತ್ತೇನೆ.

'ಚೆನ್ನಾಗಿದ್ದಾಳೆ. ಅವಳೇ ನಿನಗೆ ಸಂದೇಶ ಕಳಿಸಿದ್ದಾಳೆ.'

'ಏನದು ಸಂದೇಶ?'

'ಹೇಳ್ತೀನಿ, ನೀನು ಅಚಾನಕ್ ಭೆಟ್ಟಿಯಾದದ್ದು ಒಳ್ಳೆದಾಯ್ತು. ಈಗ ನೀನೆಲ್ಲಿರ್‍ತಿಯೆನ್ನುವುದೂ ಗೊತ್ತಿರಲಿಲ್ಲ. ಮೊನ್ನೆ ಯಾರೊ ಒಬ್ಬರು ನಿನ್ನ ಆಫೀಸಿನ ವಿಳಾಸ ಕೊಟ್ಟರು. ನೀನು ಇವತ್ತು ಸಿಗದೆ ಇದ್ರೆ ನಾನೇ ನಾಳೆ ನಿಮ್ಮ ಆಫೀಸಿಗೆ ಬರ್‍ತಿದ್ದೆ.'

ಸ್ವಾತಿ ಅಲ್ಲಿಗೇ ವಾಕ್ಯ ತುಂಡರಿಸಿ ಸುಮ್ಮನಾಗುತ್ತಾಳೆ. ನನ್ನನ್ನು ದಿಟ್ಟಿಸಿ ನೋಡುತ್ತಾಳೆ. ದೃಷ್ಟಿಗೆ ದೃಷ್ಟಿ ಡಿಕ್ಕಿ ಹೊಡೆದರೆ ಅವಳು ನೆಲ ನೋಡುತ್ತಾಳೆ.

'ನೀನು ಈಗ ದಪ್ಪಗಾಗಿದ್ದೀ.'

'ಮನೆಯ ಊಟ ಮೈಗಂಟಿದರೆ ಆಶ್ಚರ್ಯವೇನು?'

'ಆದರೆ ಒಂದೇ ಒಂದು ದಿನ ನೀನು ಹೆಂಡತಿಗೆ ತೋರಿಸಲು ಕರ್‍ಕೊಂಡು ಬರ್‍ಲಿಲ್ಲ ಅಂತ ಅವ್ವನ ತಕರಾರು. ನಾನಂದೆ ಈಗ ಪ್ರಕಾಶನಿಗೆ ನಮ್ಮ ನೆನಪು ಎಲ್ಲಾಗ್ತದೆ? ಅದಕ್ಕೆ ಅವ್ವ ಅಂದಳು– 'ಹಾಗನ್ನಬೇಡ... ಪ್ರಕಾಶ ಅಂಥವನಲ್ಲ.'

'ಹೌದು, ನಿನ್ನವ್ವನನ್ನು ನೋಡಿ ಏಳೆಂಟು ವರ್ಷಗಳಾಗಿರಬಹುದು. ಅಪ್ಪ ಸತ್ತ ನಂತರ ನಾವು ಮಾವನ ಮನೆಗೆ ಹೋದ್ವಿ. ಅನಂತರ ನೀನೂ ಮಡಗಾಂವ್ ವಸತಿಗೆ ಹೋದೆ.'

ನನಗೆ ತಪ್ಪು ಮಾಡಿದಂತೆ ಅನಿಸಿತು. ಸ್ವಾತಿಯ ತಂದೆ ನಮಗೆ ದೂರದ ಸಂಬಂಧ. ಅವರೇ ನನ್ನನ್ನು ಓದಿಸಲು ತಮ್ಮ ಮನೆಯಲ್ಲಿಟ್ಟುಕೊಂಡಿದ್ದರು. ನಾನು ಓದುತ್ತಿದ್ದಾಗ ಸ್ವಾತಿ ಶಾಲೆಗೆ ಹೋಗುತ್ತಿರಲಿಲ್ಲ. ನಾನು ಹೈಸ್ಕೂಲು ಸೇರಿದಾಗ ನಿತ್ಯ ಸ್ವಾತಿ ಪಾಟಿ ಪುಸ್ತಕ ಇಟ್ಟುಕೊಂಡು ನನ್ನೊಡನೆ ಅಭ್ಯಾಸಕ್ಕೆ ಕೂಡುತ್ತಿದ್ದಳು. ಮಧ್ಯೆ ಮಧ್ಯೆ ತನಗೆ ತೋಚದ್ದನ್ನು ನನಗೆ ಕೇಳುತ್ತಿದ್ದಳು. ನಾನು ಗಮನಿಸದಿದ್ದರೆ ಪಾಟಿಚೀಲದಲ್ಲಿದ್ದ ಹುಣಸೆಕಾಯಿ ತೆಗೆದು ನನಗೆ ಕೊಡುತ್ತಿದ್ದಳು.

ಚಹ ಕುಡಿಯುತ್ತಿದ್ದಾಗ ಸ್ವಾತಿ, 'ನನ್ನ ಮದ್ವೆ ನಿಶ್ಚಯವಾಗಿದೆ. ನೀನು ವೈನಿಗೆ ಕರ್‍ಕೊಂಡು ನಾಲ್ಕು ದಿನ ಮೊದಲೇ ಬರಬೇಕೂಂತ ಅವ್ವ ಹೇಳಿದ್ದಾಳೆ' ಎಂದಳು.

ಸ್ವಾತಿಯ ಕಣ್ಣಲ್ಲಿ ನೀರಾಡಿತು. ಇಂತಹ ಸಂತಸದ ಸುದ್ದಿ ಹೇಳುವಾಗ ಅವಳ ಕಣ್ಣಲ್ಲಿ ನೀರೇಕೆ ನಿಂತಿತು ಎನ್ನುವುದು ನನಗೆ ಅರ್ಥವಾಗುತ್ತಿತ್ತು. ಚಿಕ್ಕಂದಿನಲ್ಲಿ ನಮ್ಮಿಬ್ಬರನ್ನು ನೋಡಿ 'ಗಂಡಹೆಂಡತಿ'ಯೆಂದು ವಾಡೆಯ ಹೆಂಗಳೆಯರು ಚಾಳಿಸುತ್ತಿದ್ದರು. ಕಣ್ಣು ಮುಚ್ಚಾಲೆಯಾಡುತ್ತಿದ್ದಾಗ 'ಹೋಗು ಗಂಡನನ್ನು ಹುಡುಕು' ಎಂದು ಹೇಳಿದಾಗ ಸ್ವಾತಿ ಬಂದು ನನ್ನ ಮಡಿಲಲ್ಲಿ ಕೂಡುತ್ತಿದ್ದಳು.

ಅವಳ ಕಣ್ಣಲ್ಲಿ ನೀರು ತುಂಬಿದಾಗ ಏನು ಮಾಡಬೇಕೆಂಬುದೇ ಗೊತ್ತಾಗಲಿಲ್ಲ. ನಾವು ಈಗ ಮಕ್ಕಳಾಗಿರಲಿಲ್ಲ. ನನ್ನ ಮದುವೆಯಾಗಿತ್ತು. ಅವಳು ಬೇರೊಬ್ಬನೊಂದಿಗೆ ಮದುವೆಯಾಗುವವಳಿದ್ದಳು.